ರೀತಿ ಮಾಡುವುದಕ್ಕೆ ಸಂಬಂಧಪಟ್ಟವರಿಗೆ ತಾವು ಏನಾದರೂ ನಿರ್ದೇಶನಗಳನ್ನು ಕೊಡಬಹುದೇ?

ಶ್ರೀ ಎಂ.ಪಿ. ಪ್ರಕಾಶ್ : ಇದೊಂದು ಯೋಗ್ಯವಾದ ಸಲಹೆ. ಆ ಒಂದು ದೃಷ್ಟಿಯನ್ನಿಟ್ಟುಕೊಂಡೇ, ಗ್ರಾಮ ಪಂಚಾಯಿತಿಯ ಮುಖಾಂತರ ಟೈಸಂ ಯೋಜನೆ ಅಡಿಯಲ್ಲಿ ನಿರುದ್ಯೋಗಿಗಳಾಗಿರತಕ್ಕ ಯುವಕರಿಗೆ ತರಬೇತಿ ಕೊಟ್ಟು, ಆಯಾ ಗ್ರಾಮ ಪಂಚಾಯಿತಿಯವರು ಕನಿಷ್ಠ ಒಂದು ಟೂಲ್ ಕಿಟ್ ಅನ್ನಾದರೂ ಇಟ್ಟುಕೊಂಡಿರಬೇಕು ಎನ್ನುವ ಯೋಜನೆ ಇದೆ. ಅವುಗಳು ಸಣ್ಣಪುಟ್ಟ ಕೈಪಂಪ್‌ಗಳನ್ನು ಆಳವಡಿಸಿರತಕ್ಕ ಕೊಳವೆ ಬಾವಿಗಳನ್ನು ದುರಸ್ತಿ ಮಾಡಬೇಕು. ಐ.ಟಿ.ಐ. ಮೊದಲಾದ ತರಬೇತಿ ಹೊಂದಿರತಕ್ಕ ಯುವಕರು ಈ ಕರು ನೀರು ಯೋಜನೆಯಲ್ಲಿ ಏನಾದರೂ ವಿರಿಳಿತದಿಂದ ಅಥವಾ ಬೇರೆ ಕಾರಣಗಳಿಂದ ಕೈಪಂಪ್ ಕೆಟ್ಟಿದ್ದರೆ ಅದನ್ನು ರೀವೈಂಡಿಂಗ್ ಮಾಡತಕ್ಕ ಕೆಲಸಗಳು ಆಯಾ ಮಟ್ಟದಲ್ಲಿ ನಡೆಯುತ್ತಿದ್ದರೆ, ಜಾಗ್ರತೆಯಾಗಿ ಕೊಳವೆ ಬಾವಿಗಳನ್ನು ಸುಸ್ಥಿತಿಯಲ್ಲಿ ಇಡುವಂತಾಗುತ್ತದೆ. ಆದರೆ ನೀವು ಹೇಳಿದಂತೆ, ಅನೇಕ ಸಂದರ್ಭಗಳಲ್ಲಿ ಬೇರೆ ಬೇರೆ ಕಾರಣಗಳಿಗೂ ಕೂಡ ಅವುಗಳನ್ನು ಯಾವ ರೀತಿಯಾಗಿ ಸಾರ್ವಜನಿಕವಾಗಿ ಉಪಯೋಗಿಸಿಕೊಳ್ಳಬೇಕು ಎನ್ನುವುದರ ಬಗ್ಗೆ ಕೂಡ ನಮ್ಮ ಜನಗಳಲ್ಲಿ ಜಾಗೃತಿಯನ್ನು ಮೂಡಿಸಬೇಕಾಗುತ್ತದೆ. ಅನೇಕ ಕೊಳವೆ ಬಾವಿಗಳ ರಾಡ್‌ಗಳನ್ನು ಮುರಿದಿರುತ್ತಾರೆ. ಯಾರಾದರೂ ಹುಡುಗರು ಕೊಳವೆ ಬಾವಿಗಳ ಮೇಲೆ ನಿಂತು ಅದನ್ನು ಕೆಟ್ಟದಾಗಿ ಉಪಯೋಗಿಸಿಕೊಂಡಾಗ ರಾಡ್‌ಗಳು ಮುರಿದು ಹೋಗಿರತಕ್ಕವು ಹೆಚ್ಚಿನ ಸಂಖ್ಯೆಯಲ್ಲಿ ಇವೆ. ಆ ದೃಷ್ಟಿಯನ್ನಿಟ್ಟುಕೊಂಡು ನಾನು ಅವರಿಗೆ ಮಾಹಿತಿಯನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಅಥವಾ ಇಡೀ ರಾಜ್ಯದಲ್ಲಿ ಬರುವಂತಹ ಕೊಳವೆ ಬಾವಿಗಳಿಗೆ ಸಾಮಗ್ರಿಗಳನ್ನು ಕೊಂಡುಕೊಳ್ಳುವುದಕ್ಕೆ ಹಾಗೂ ಕೊಳವೆ ಬಾವಿಗಳನ್ನು ಕೊಂಡುಕೊಳ್ಳುವುದಕ್ಕೆ ಎಸ್.ಪಿ.ಡಿ. ದರದಲ್ಲಿ ಏನು ನಿಗದಿಪಡಿಸಬೇಕೋ ಅದನ್ನು ನಿಗದಿಪಡಿಸಲಾಗಿದೆಯೇ ಎಂಬುದು ನನ್ನ ಪ್ರಶ್ನೆ.

ಶ್ರೀ ಎಂ.ಪಿ. ಪ್ರಕಾಶ್ : ಈಗ ಎಸ್.ಪಿ.ಡಿ. ರೇಟ್‌ನಲ್ಲಿ ಇರತಕ್ಕ ದರದಲ್ಲಿ ತೆಗೆದುಕೊಳ್ಳಬೇಕು ಎನ್ನತಕ್ಕದ್ದು ಇದೆ. ಇದು ಸದರಿ ಪ್ರಶ್ನೆಗೆ ನೇರವಾಗಿ ಸಂಬಂಧ ಪಡದಿದ್ದರೂ ಕೂಡ ನಾನು ಉತ್ತರಿಸುತ್ತಿದ್ದೇನೆ. ನಾವು ಎಸ್.ಪಿ.ಡಿ. ದರದಲ್ಲಿ ತೆಗೆದುಕೊಳ್ಳಬೇಕಾಗಿದ್ದರೂ, ಕೆಲವೊಂದು ತುರ್ತು ಸಂದರ್ಭಗಳಲ್ಲಿ, ಕೆಲವು ನಿಯಮಾವಳಿಗಳನ್ನು ಸಡಿಲಗೊಳಿಸಲು ಅನುಮತಿಯನ್ನು ಪಡೆದುಕೊಂಡು ಕೆಲಸ ಮಾಡಬೇಕು ಎನ್ನತಕ್ಕಂತಹ ನಿಯಮಾವಳಿ ಕೂಡ ಇದೆ.

ಜವಾಹರ್ ರೋಜಗಾರ್ ಯೋಜನೆಯ ಫಲಾನುಭವಿಗಳು

2412 - ಶ್ರೀ ಬಸನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ನಗರದಲ್ಲಿ ಇದುವರೆಗೆ ಜವಾಹರ್ ರೋಜ್‌ಗಾರ್ ಯೋಜನೆ ಅಡಿಯಲ್ಲಿ ಎಷ್ಟು ಫಲಾನುಭವಿಗಳಿಗೆ ಸಾಲ ಸೌಲಭ್ಯ ದೊರೆತಿದೆ (ವಿವರ ನೀಡುವುದು)

ಆ) ಸಾಲ ಪಡೆದ ಫಲಾನುಭವಿಗಳು ತಮ್ಮ ಕಸಬು ಆರಂಭಿಸಿದ್ದಾರೆಯೇ? ಎಷ್ಟು ಲಾಭದಲ್ಲಿ ನಡೆಯುತ್ತಿದೆ? (ವಿವರ ನೀಡುವುದು)

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ನಿರುದ್ಯೋಗಿ ಮತ್ತು ಸಾಕಷ್ಟು ಉದ್ಯೋಗಗಳಿಲ್ಲದ ಗ್ರಾಮೀಣ ಪ್ರದೇಶದಲ್ಲಿರುವ ಪುರುಷ ಹಾಗೂ ಮಹಿಳೆಯರಿಗೆ ಹೆಚ್ಚುವರಿ ಲಾಭಗಳಿಸಿ ಕೊಡುವಂತಹ ಉದ್ಯೋಗ ಸೃಜಿಸುವುದು ಜವಾಹರ್ ರೋಜ್‌ಗಾರ್ ಯೋಜನೆಯ ಮೂಲ ಉದ್ದೇಶವಾದ್ದರಿಂದ ನಗರ ಪ್ರದೇಶದವರಿಗೆ ಈ ಯೋಜನೆಯಡಿ ಸಾಲ ಸೌಲಭ್ಯ ಒದಗಿಸುವುದು ಈ ಯೋಜನೆ ವ್ಯಾಪ್ತಿಗೆ ಬರುವುದಿಲ್ಲ.

ಆ) ಆನ್ವಯಿಸುವುದಿಲ್ಲ.

ಶ್ರೀ ಬಸನಗೌಡ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಜವಾಹರ್ ರೋಜ್‌ಗಾರ್ ಯೋಜನೆಯಡಿಯಲ್ಲಿ ನಗರ ಪ್ರದೇಶಗಳಲ್ಲಿ ಸಾಲ ಸೌಲಭ್ಯಗಳನ್ನು ಒದಗಿಸುವುದು, ಈ ಯೋಜನೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದು ತಿಳಿಸಿದ್ದೀರಿ. ಆದರೆ ನಗರದ ವ್ಯಾಪ್ತಿಯಲ್ಲಿ ಬರುವಂತಹ ನಿರುದ್ಯೋಗಿ ಯುವಕರಿಗೆ ಯಾವ ಒಂದು ಯೋಜನೆಯಡಿಯಲ್ಲಿ ಅವರಿಗೆ ಸಾಲ ಸೌಲಭ್ಯ ಒದಗಿಸುವಂತಹ ವ್ಯವಸ್ಥೆ ಇದೆ ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಇದೊಂದು ಕೇಂದ್ರ ಸರ್ಕಾರದ ಯೋಜನೆ. ಜವಾಹರ್ ರೋಜ್‌ಗಾರ್ ಯೋಜನೆ ಕೇಂದ್ರ ಸರ್ಕಾರದ ಯೋಜನೆಯಾಗಿರುವುದರಿಂದ, ಆ ಯೋಜನೆಯ ಕೆಲವು ನೀತಿ ಮತ್ತು ನಿಯಮಗಳನ್ನು ಅನುಸರಿಸಿ, ಅದನ್ನು ನಾವು ಅನುಷ್ಠಾನಗೊಳಿಸಬೇಕಾಗುತ್ತದೆ. ಆ ಯೋಜನೆಯಲ್ಲಿ ರಾಜ್ಯ ಸರ್ಕಾರದ ಪಾಲೂ ಇದೆ.

ನಗರ ಪ್ರದೇಶಗಳ ನಿರುದ್ಯೋಗಿಗಳಿಗೂ ಕೂಡ ಉದ್ಯೋಗ ಒದಗಿಸಿಕೊಡುವುದರಲ್ಲಿ, ಇದು ಬಹಳ ಪ್ರಮುಖವಾದ ಚರ್ಚೆ ಇದಾಗುವುದರಿಂದ, ಇದರ ಬಗ್ಗೆಯೂ ಕೂಡ ನಮ್ಮ ಸರ್ಕಾರ ಕೇಂದ್ರ ಸರ್ಕಾರಕ್ಕೆ ಬರೆಯುತ್ತದೆ. ತಾವೂ ಕೂಡ ತಮ್ಮ ಪ್ರಭಾವವನ್ನು ಕೇಂದ್ರ ಸರ್ಕಾರದ ಮೇಲೆ ಬೀರಿ, ಈ ಯೋಜನೆಯಲ್ಲಿ ನಗರಪ್ರದೇಶದ ನಿರುದ್ಯೋಗಿಗಳನ್ನು ಸೇರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ತಮ್ಮ ಮೂಲಕ ಅವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಮೀನು ಅಭಿವೃದ್ಧಿ ಮಂಡಳಿ

2254 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಮೀನು ಅಭಿವೃದ್ಧಿ ಮಂಡಳಿ (ಕೆ.ಎಫ್.ಡಿ.ಸಿ) ಶಾಖೆಗಳನ್ನು ಎಲ್ಲೆಲ್ಲಿ ಹೊಂದಿದೆ?

ಆ) ಒಟ್ಟು ಇರುವ ಸಿಬ್ಬಂದಿಗಳೆಷ್ಟು?

ಇ) ಕೆ.ಎಫ್.ಡಿ.ಸಿ.ಯನ್ನು ಲಾಭದಾಯಕವನ್ನಾಗಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ, ಮಂಗಳೂರು ಇದು ಉತ್ಪಾದನಾ ಘಟಕಗಳನ್ನು ಮಂಗಳೂರು, ಉಳ್ಳಾಲ, ಕುಳ್ಳಿ, ಕಾಪು, ಮಲ್ಪೆ, ಗಂಗೊಳ್ಳಿ, ಭಟ್ಕಳ, ತದಡಿ ಮತ್ತು ಕಾರವಾರಗಳಲ್ಲಿ ಹೊಂದಿದೆ. ಜೊತೆಗೆ 20 ಮಾರಾಟ ಮಳಿಗೆಗಳನ್ನು ಬೆಂಗಳೂರು (8 ಸಂಖ್ಯೆ), ಹುಬ್ಬಳ್ಳಿ, ಮಡಿಕೇರಿ, ವಿರಾಜಪೇಟೆ,